# ಮಗುವಿನ ಮನಸು ಆದೆಷ್ಟು ಸೊಗಸು!

**ಮಕ್ಕಳ ಪ್ರತೀ ಹಂತದ ಬೆಳವಣಿಗೆಯಲ್ಲಿ ಪೋಷಕರ ಪಾತ್ರ ಬಹಳ ಮಹತ್ವದ್ದು. ಮಗುವಿನ ಪ್ರತಿ ಹೆಜ್ಜೆಯಲ್ಲೂ ಹೆತ್ತವರು ನಿಗಾ ಇಟ್ಟು ಬೆಳೆಸಿದರೆ ಮಗು ಸಂವೇದನಾತ್ಮಕವಾಗಿ ಬೆಳೆಯುತ್ತದೆ. ಮುಂದೆ ಇದರಿಂದ ಮಕ್ಕಳಲ್ಲಿ ಉತ್ತಮ ಗುಣ, ಸದ್ಭಾವನೆ ಬೆಳೆಯಲು ಸಹಕಾರಿಯಾಗುತ್ತದೆ.**

**■ ಪರಮೇಶ್ವರಯ್ಯ ಸೊಪ್ಪಿಮಠ**

ಜಗತ್ತಿನಲ್ಲಿ ಮಕ್ಕಳನ್ನು ಪ್ರೀತಿ ಮಾಡದವರು ಯಾರಿದ್ದಾರೆ ಹೇಳಿ? ತಂದೆ ತಾಯಿಯರ ಇಂದಿನ ದುಡಿಮೆ ಹೋರಾಟ ಏತಕ್ಕೆ? ಮತ್ತು ಯಾರಿಗೆ? ಎಂದು ಕೇಳಿದ ತಕ್ಷಣ ನಮ್ಮ ಮಕ್ಕಳಿಗಾಗಿ ಎಂದು ಸ್ಪಷ್ಟವಾಗಿ ಹೇಳುತ್ತಾರೆ. ತಾವು ಜೀವನದಲ್ಲಿ ಬಹಳ ಕಷ್ಟಪಟ್ಟು ಮೇಲಕ್ಕೆ ಬಂದಿದ್ದೇವೆ. ನಮ್ಮ ನೋವು, ಸಂಕಷ್ಟ, ವೇದನೆ ನಮಗೇ ಇರಲಿ. ನಮ್ಮ ಮಕ್ಕಳು ಸಂತಸವಾಗಿರಬೇಕು. ಸುಂದರವಾಗಿ ಬದುಕನ್ನು ನಡೆಸಬೇಕು ಎಂದು ಹೇಳುತ್ತಾರೆ. ಆದರೆ ವಿಪರ್ಯಾಸವೆಂದರೆ ಅದು ಮಾತಿಗೆ ಸೀಮಿತವಾಗಿದೆ. ಕಾರ್ಯರೂಪಕ್ಕೆ ಇಳಿಸುವುದರಲ್ಲಿ ನಮ್ಮ ಪಾಲಕರು ಸೋಲುತ್ತಿದ್ದಾರೆ. ಮಕ್ಕಳಿಗೆ ಹಣ, ಅಂತಸ್ತು, ಆಸ್ತಿ ಮಾಡುವುದಕ್ಕೆ ಕೊಟ್ಟ ಆದ್ಯತೆ ಆ ಮಕ್ಕಳ ಮನಸ್ಸಿಗೆ, ಆಸೆಗೆ, ಭಾವನೆಗೆ ಬೆಲೆ ಕೊಡುತ್ತಿಲ್ಲ. ವಾಸ್ತವದಲ್ಲಿ ಬಹುತೇಕರು ತಮ್ಮ ಮಕ್ಕಳನ್ನು ಅರ್ಥಮಾಡಿಕೊಳ್ಳುತ್ತಿಲ್ಲ. ನಮ್ಮ ಮಕ್ಕಳನ್ನು ನಾವೇ ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ?

ಮಗುವಿನ ವರ್ತನೆ ಸಾಮಾನ್ಯವಾಗಿ ಯಾವ ರೀತಿ ಇರಬೇಕು, ಯಾವ ರೀತಿಯ ಸ್ವಭಾವದಿಂದ ಭವಿಷ್ಯದಲ್ಲಿ ಮಗುವಿನ ಜೀವನ ಸುಖಮಯವಾಗಿರುತ್ತದೆ ಎಂಬುದನ್ನು ತಂದೆ ತಾಯಿಯರು ತಿಳಿದಿರುವುದು ಅವಶ್ಯ. ಮಗುವಿನ ಸಮಸ್ಯಾತ್ಮಕ ವರ್ತನೆಗೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಪರಿಹಾರ ಮಾರ್ಗಗಳು ಇಲ್ಲ. ಅಂದರೆ ಒಂದು ಮಗುವಿಗೆ ಅನ್ವಯಿಸುವುದು ಇನ್ನೊಂದು ಮಗುವಿಗೆ ಅನ್ವಯಿಸುತ್ತದೆ ಎಂದು ಹೇಳಲು ಬರುವುದಿಲ್ಲ. ನಮಗೆ ಅಸಮರ್ಪಕ ಮತ್ತು ಇಕ್ಕಟ್ಟಿನ ಪರಿಸ್ಥಿತಿಯನ್ನು ಸ್ವತಃ ನಾವು ಹೇಗೆ ಎದುರಿಸುತ್ತೇವೆ ಹಾಗೆಯೇ ನಮ್ಮ ಮಗುವಿನೊಂದಿಗೆ ಪರಿಸ್ಥಿತಿಗಳನ್ನು ತಿಳಿದುಕೊಂಡು ನಿಭಾಯಿಸಬೇಕು. ಯಾವುದೇ ಕಾರಣಕ್ಕೂ ನಮ್ಮ ಮಗುವಿನಲ್ಲಿ ತಾನು ಅಸುರಕ್ಷಿತ ಮತ್ತು ಒಂಟಿ ಎಂಬ ಭಾವನೆ ಬರದಂತೆ ನೋಡಿಕೊಳ್ಳಬೇಕು. ಒಂದು ಪಕ್ಷ ಅದು ಬಂದಲ್ಲಿ ಆ ಮಗು ಎಂಬ ಸುಂದರ ಹೂವು ಅರಳಲು ಸಾಧ್ಯವಿಲ್ಲ.

ಮಗು ತನ್ನ ಮೇಲೆ ತಾನು ನಂಬಿಕೆ ಕಳೆದುಕೊಳ್ಳುತ್ತಿರುವಾಗ, ಅದು ತನ್ನ ಬೆರಳುಗಳನ್ನು ಚೀಪಿ ತನಗೆ ತಾನೇ ಧೈರ್ಯ ತಂದುಕೊಳ್ಳುತ್ತದೆ. ಮಗುವಿನೊಂದಿಗೆ ಹೆಚ್ಚು ಕಠಿಣವಾಗಿ ವರ್ತಿಸುವುದು ಅಥವಾ ಅದು ಅತಿ ಮುದ್ದಿನಿಂದ ವರ್ತಿಸುವುದೂ ತರವಲ್ಲ. ಪಾಲಕರು ಧೈರ್ಯ ಮತ್ತು ತಿಳಿವಳಿಕೆಯಿಂದ ವರ್ತಿಸಿದರೆ ಮಗುವನ್ನು ಸರಿಯಾದ ದಾರಿಯಲ್ಲಿ ಬೆಳೆಸಬಹುದು. ಎಲ್ಲಕ್ಕಿಂತ ಮೊದಲು ತಂದೆ ತಾಯಿಯರು ತಮ್ಮ ಮಗುವನ್ನು ಹೇಗೆ ನಡೆಸಿಕೊಳ್ಳುತ್ತಿದ್ದೇವೆ ಎಂದು ಆತ್ಮವಿಮರ್ಶೆ ಮಾಡಿಕೊಳ್ಳಬೇಕು.

### ಶಿಸ್ತು

ಯಾವುದೇ ಪಾಲಕರು ಶಿಕ್ಷೆ ಯಾಕೆ ನೀಡುತ್ತೀರಿ ಎಂದು ಕೇಳಿದರೆ, ಮಾತು ಕೇಳಲ್ಲ, ಹೇಳಿದ್ದು ಪಾಲನೆ ಮಾಡಲ್ಲ, ನಮ್ಮ ಮಗುವಿನಲ್ಲಿ ಸರಿಯಾದ ಶಿಸ್ತಿಲ್ಲ ಎಂದು ಹೇಳುವುದನ್ನು ಕೇಳಿದ್ದೇವೆ. ಮಗುವನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವುದು ಶಿಸ್ತು ಎಂಬುದು ಬಹಳಷ್ಟು ಜನರ ಅಭಿಪ್ರಾಯ. ಸ್ವಚ್ಛತೆ ಮತ್ತು ಆರೋಗ್ಯ ಕ್ಷೇತ್ರದ ನಿಯಮಗಳನ್ನು ಪಾಲಿಸಲು ಶಿಸ್ತು ಅಗತ್ಯವೆಂದು



ಚಿತ್ರ: ರಂಜು ಪಿ.